# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ದಕ್ಷಿಣ ವಲಯ, ವಿಜಯನಗರ ಉಪ ವಿಭಾಗ

### ವಾರ್ಡ್ ಸಂಖ್ಯೆ:132, ಅತ್ತಿಗುಪ್ಪೆ

ದಿನಾಂಕ:18-12-2021 ರಂದು ಪೂರ್ವಾಹ್ನ 10.30ರ ಗಂಟೆಗೆ ಶ್ರೀ ರಾಧಕೃಷ್ಣ, ನೋಡಲ್ ಅಧಿಕಾರಿಗಳು, ವಾರ್ಡ್132ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಆರ್ಯಪಾಲಕ ಅಭಿಯಂತರರು, ವಿಜಯನಗರ ಉಪ ವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:

**ಸಭೆಯಲ್ಲಿ ಹಾಜರಿದ್ದವರು:**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ರಾಧಕೃಷ್ಣ | ನೋಡಲ್ ಅಧಿಕಾರಿಗಳು ವಾರ್ಡ್-132 |
| 2 | ಶ್ರೀ ಸ್ವಾಮಿ.ಕೆ.ಎಸ್. | ಸಹಾಯಕ ಅಭಿಯಂತರರು & ಕಾರ್ಯದರ್ಶಿಗಳು, ವಾರ್ಡ್-132 |
| 3 | ಶ್ರೀ ಮಾರುತಿ ಶೇಟ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ ಸಂದೀಪ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರಿ ಪ್ರಕಾಶ್ | ಕಂದಾಯ ವಿಭಾಗ |
| 6 | ಶ್ರೀ ಶಿವಕುಮಾರ್ | ಬೀದಿ ದೀಪಗಳ ನಿರ್ವಹಣೆ |
| 7 | | ಪಶು ಸಂಗೋಪನೆ |
| 8 | ಶ್ರೀ ಪ್ರಕಾಶ್ | ಕಂದಾಯ ಪರಿವೀಕ್ಷಕರು |
| 9 | ಶ್ರೀ ಲಕ್ಷ್ಮಿ ನಾರಾಯಣ | ಸಾರ್ವಜನಿಕರು |
| 10 | ಶ್ರೀಮತಿ ಜ್ಯೋತಿ | ಸಾರ್ವಜನಿಕರು |

**: ನಡಾವಳಿಯ ವರದಿ:**

ಕಾರ್ಯದರ್ಶಿಯವರಾದ ಶ್ರೀ ಸ್ವಾಮಿ.ಕೆ.ಎಸ್. ರವರು ಮಾತನಾಡುತ್ತಾ ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಯವರನ್ನು, ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಮತ್ತು ಸಾರ್ವಜನಿಕರಿಗೆ ಸ್ವಾಗತ ಕೋರಿದರು.

**ಕೋವಿಡ್-19, ಸಾಂಕ್ರಾಮಿಕ ರೋಗದ ಬಗ್ಗೆ.**

ಶ್ರೀ ಮಾರುತಿ ಶೇಟ್ ರವರು ಹಿರಿಯ ಆರೋಗ್ಯ ಪರಿವೀಕ್ಷಕರಾಗಿದ್ದು ಸಭೆಯಲ್ಲಿ ಮಾತನಾಡುತ್ತಾ ವಾರ್ಡ್-132 ರ ವ್ಯಾಪ್ತಿಯಲ್ಲಿ ಪ್ರತಿ ನಿತ್ಯವು ಕೋವಿಡ್ ಪರೀಕ್ಷೆ ಮಾಡುವ ಸಂಬಂಧವಾಗಿ 3 ತಂಡಗಳನ್ನು ರಚಿಸಿಕೊಂಡು ಕಾರ್ಯ ನಿರ್ವಹಿಸುತ್ತಿರುವ ರೀತಿಯನ್ನು ಸಭೆಯಲ್ಲಿ ತಿಳಿಸಿದರು. ಅದರಂತೆ

ಒಂದು ತಂಡವು ಆರೋಗ್ಯ ಇಲಾಖೆ ವತಿಯಿಂದ ಪರೀಕ್ಷೆ ಮತ್ತು ಲಸಿಕೆ ನೀಡುವ ಕಾರ್ಯದಲ್ಲಿ ನಿರತವಾಗಿದೆ, 2ನೇ ತಂಡವು ಪ್ರತಿ ಮನೆ-ಮನೆಗಳಿಗೆ ಭೇಟಿ ನೀಡಿ ಕೋವಿಡ್ 1ನೇ ಡೋಸ್ ಲಸಿಕೆ ಹಾಕಿಸಿಕೊಂಡಿರುವವರ ವಿವರ, ಹಾಕಿಸಿಕೊಳ್ಳಬೇಕಾಗಿರುವವರ ವಿವರಗಳ ಸಂಗ್ರಹಣೆಯಲ್ಲಿ ನಿರತವಾಗಿದೆ ಮತ್ತು 3ನೇ ತಂಡವು ವಾರ್ಡ್ ವ್ಯಾಪ್ತಿಯಲ್ಲಿ ವಾಣಿಜ್ಯ ಸಂಕೀರ್ಣಗಳಿಗೆ ಭೇಟಿ ನೀಡಿ ಹೊರ ರಾಜ್ಯಗಳಿಂದ ಬಂದವರ ಮತ್ತು ಕೆಲಸ ನಿರ್ವಹಿಸುತ್ತಿರುವವರ ವಿವರಗಳನ್ನು ಕಲೆ ಹಾಕಿ ಅವರುಗಳಲ್ಲಿ ಲಸಿಕೆ ಹಾಕಿಸಿಕೊಳ್ಳದವರನ್ನು ಪತ್ತೆ ಮಾಡಿ ಲಸಿಕೆ ಹಾಕಿಸಿಕೊಳ್ಳಬೇಕಾಗಿರುವ ಬಗ್ಗೆ ಜಾಗೃತಿಯಲ್ಲಿ ನಿರತವಾಗಿರುವ ಬಗ್ಗೆ ಸಭೆಗೆ ತಿಳಿಸಿದರು. ಈ ರೀತಿ ಆರೋಗ್ಯ ಇಲಾಖೆಯ ವತಿಯಿಂದ ಜಾರಿಯಲ್ಲಿರುವ ಜಾಗೃತಿ ಕಾರ್ಯಕ್ರಮಕ್ಕೆ ಸ್ವಯಂ ಸೇವಕರ ತಂಡವು ಸಹ ಪಾಲ್ಗೊಂಡು ಕೋವಿಡ್ ನಿಯಂತ್ರಣ ವಿಚಾರದಲ್ಲಿ ಪ್ರಗತಿ ಸಾಧಿಸಿರುವ ಬಗ್ಗೆ ಸಭೆಗೆ ತಿಳಿಸಿದರು.

ಕೊವ್ಯಾಕ್ಸಿನ್ ಲಸಿಕೆ ಹಾಕಿಸಿಕೊಂಡಲ್ಲಿ 30 ದಿನಗಳ ಅಂತರದಲ್ಲಿ 2ನೇ ಡೋಸ್ ಹಾಕಿಸಿಕೊಳ್ಳಬೇಕಾಗಿದ್ದು ಕೋವಿಶೀಲ್ಡ್ ಹಾಕಿಸಿಕೊಂಡಲ್ಲಿ 84 ದಿನಗಳ ಅಂತರದಲ್ಲಿ 2ನೇ ಡೋಸ್ ಹಾಕಿಸಿಕೊಳ್ಳಬೇಕಾಗಿರುವ ಬಗ್ಗೆ ಸಭೆಗೆ ತಿಳಿಸಿದರು. ವಾರ್ಡ್ ವ್ಯಾಪ್ತಿಯಲ್ಲಿ ಶೇ.65ರಷ್ಟು ಪ್ರಮಾಣದಲ್ಲಿ 1ನೇ ಡೋಸ್ ಹಾಕಿಸಿಕೊಂಡಿದ್ದು 2ನೇ ಡೋಸ್ ಹಾಕಿಸಿಕೊಳ್ಳುವ ಕಾರ್ಯಕ್ರಮವು ಪ್ರಗತಿಯಲ್ಲಿರುವ ಬಗ್ಗೆ ಸಭೆಗೆ ತಿಳಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಅನೇಕ ಐ.ಎ.ಎಸ್ ತರಭೇತಿ ಕೇಂದ್ರಗಳಿದ್ದು ಅವುಗಳಲ್ಲಿ ಒಂದು ಬಾರಿಗೆ 200 ಮಂದಿ ತರಬೇತಿ ಪಡೆಯುವ ಸಂಬಂಧ ಹಾಜರಾಗುತ್ತಿರುವುದನ್ನು ಗಮನಿಸಿ ಪ್ರತಿ ನಿತ್ಯವು ಒಂದೊಂದು ಕೇಂದ್ರಕ್ಕೂ ಭೇಟಿ ನೀಡಿ ಲಸಿಕಾ ಅಭಿಯಾನದ ಬಗ್ಗೆ ಕ್ರಮ ವಹಿಸುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು.

## ಕಂದಾಯ ಇಲಾಖೆಯು ನಿರ್ವಹಣೆಗೆ ಸಂಬಂಧಿಸಿದಂತೆ:

ವಾರ್ಡ್ ವ್ಯಾಪ್ತಿಯಲ್ಲಿ ಕಂದಾಯ ಇಲಾಖಾ ವತಿಯಿಂದ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣದಲ್ಲಿ ಮೃತರಾಗಿರುವವರ ವಿವರಗಳನ್ನು ಆಧರಿಸಿ ಸರ್ಕಾರದ ವತಿಯಿಂದ ಸಂದಾಯವಾಗಬೇಕಿರುವ ಪರಿಹಾರ ಹಣವನ್ನು ತಲುಪಿಸುವ ನಿಟ್ಟಿನಲ್ಲಿ ಮನೆ-ಮನೆಗಳಿಗೂ ಭೇಟಿ ನೀಡಿ ಸರ್ಕಾರದ ಮಾರ್ಗಸೂಚಿಯಂತೆ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಕಂದಾಯ ಪರಿವೀಕ್ಷಕರಾದ ಶ್ರೀ ಪ್ರಕಾಶ್ ರವರು, ಸಭೆಗೆ ತಿಳಿಸಿದರು.

## ಸ್ವಚ್ಛತೆ ಮತ್ತು ಘನ ತ್ಯಾಜ್ಯ ನಿರ್ವಹಣೆ ಬಗ್ಗೆ:

ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ ವಾರ್ಡ್ ವ್ಯಾಪ್ತಿಯಲ್ಲಿ 17 ಬ್ಲಾಕ್ ಸ್ಪಾಟ್‌ಗಳು ಇದ್ದು ಸದರಿ ಸ್ಥಳದಿಂದ ಸಂಗ್ರಹವಾಗಿರುವ ತ್ಯಾಜ್ಯಗಳನ್ನು 17 ಆಟೋಗಳನ್ನು ಬಳಸಿಕೊಂಡು ಕಾರ್ಯ ನಿರ್ವಹಿಸುತ್ತಿದ್ದು ಯಾವುದೇ ರೀತಿಯಲ್ಲಿಯೂ ದೂರು ಬಾರದಂತೆ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು.

ಮುಂದುವರೆದು ರೈಲ್ವೆ ಸಮಾನಾಂತರ ರಸ್ತೆಯಲ್ಲಿ ರಸ್ತೆ ಉದ್ದಕ್ಕೂ ವಾಹನ ನಿಲುಗಡೆ ಮಾಡಿರುವುದರಿಂದ ಬೀದಿ ದೀಪಗಳ ದುರಸ್ತಿಗೆ ವಾಹನಗಳಿಂದ ತೊಂದರೆ ಆಗುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು. ಈ ವಿಚಾರವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಸಂಚಾರ ವಿಭಾಗ ಪೊಲೀಸ್ ಇಲಾಖೆಯವರ ಸಹಕಾರ ಪಡೆದುಕೊಳ್ಳಲು ನಿರ್ಧರಿಸಲಾಯಿತು.

## ಸರ್ವಜ್ಞ ಕೆಳ ಸೇತುವೆ ಮೇಲ್ಭಾಗದಲ್ಲಿ ಶೌಚಾಲಯ ವ್ಯವಸ್ಥೆ ಒದಗಿಸುವ ಬಗ್ಗೆ.

ಕಾರ್ಡ್ ರಸ್ತೆಯಲ್ಲಿ ಸರ್ವಜ್ಞ ಕೆಳ ಸೇತುವೆ ಬರುವ ಸ್ಥಳದಲ್ಲಿ ಯಾವುದೇ ರೀತಿಯ ಕಟ್ಟಡಗಳಾಗಲೀ, ಯಾವುದೇ ರೀತಿಯ ಕಟ್ಟಡ ಇಲ್ಲದೇ ಇರುವುದರಿಂದ ಸದರಿ ಸ್ಥಳದಲ್ಲಿ ಸಾರ್ವಜನಿಕರು ಬಯಲು ಮೂತ್ರಾಲಯ ಮಾಡಿಕೊಂಡಿದ್ದು ವಾಹನ ಸವಾರರು, ಪಾದಚಾರಿಗಳು ಮೂತ್ರಾಲಯ ಮಾಡಿಕೊಂಡಿರುತ್ತಾರೆ . ಈ ಭಾಗದಲ್ಲಿ ಒಂದು ಸಾರ್ವಜನಿಕ ಶೌಚಾಲಯದ ಅವಶ್ಯಕತೆ ಇರುವ ಬಗ್ಗೆ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಅನುದಾನ ಲಭ್ಯತೆ ಆಧಾರದ ಮೇಲೆ ಸದರಿ ನಿರ್ಮಾಣದ ಬಗ್ಗೆ ತುರ್ತು ಕ್ರಮ ಕೈಗೊಳ್ಳುವುದಾಗಿ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು.

## ಸಂಚಾರ, ಕಾನೂನು & ಸುವ್ಯವಸ್ಥೆಗೆ ಸಂಬಂಧಿಸಿದಂತೆ:

ವಾರ್ಡ್ ವ್ಯಾಪ್ತಿಯಲ್ಲಿ ಗಂಗೊಂಡನಹಳ್ಳಿ ಸುತ್ತ-ಮುತ್ತಲಿನ ಪ್ರದೇಶ ಹೊರತುಪಡಿಸಿ ಎಲ್ಲಾ ಪ್ರದೇಶಗಳಲ್ಲಿಯೂ ಸಂಚಾರ, ಕಾನೂನು ಮತ್ತು ಸುವ್ಯವಸ್ಥೆ ತೃಪ್ತಿಕರವಾಗಿ ಕಾರ್ಯ ನಿರ್ವಹಣೆ ಮಾಡುತ್ತಿರುವ ಬಗ್ಗೆ ಸಾರ್ವಜನಿಕರು ಅಭಿಪ್ರಾಯ ವ್ಯಕ್ತ ಪಡಿಸಿದರು. ಗಂಗೊಂಡನಹಳ್ಳಿ ವ್ಯಾಪ್ತಿಯಿಂದ ಕುರಿ-ಕೋಳಿ ತ್ಯಾಜ್ಯಗಳನ್ನು ತಂದು ಸುರಿದು ಅವುಗಳನ್ನು ತಡೆಯಲು ಮಾರ್ಷಲ್‌ಗಳನ್ನು ನಿಯೋಜಿಸಿದ್ದರೂ ಸಹ ಜನರ ಗುಂಪು ಗುಂಪಾಗಿ ಬಂದು ಹಲ್ಲೆ ಮಾಡಿರುವ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿದರು. ಈ ಸ್ಥಳಗಳಲ್ಲಿ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಕ್ರಮ ವಹಿಸುವ ಬಗ್ಗೆ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

## ಮಹಾನಗರ ಪಾಲಿಕೆಯ ಕಟ್ಟಡಗಳ ನಿರ್ವಹಣೆ ಬಗ್ಗೆ:

ನೋಡಲ್ ಅಧಿಕಾರಿಗಳು ಮಾತನಾಡುತ್ತಾ ವಾರ್ಡ್ ವ್ಯಾಪ್ತಿಯಲ್ಲಿ ಅನೇಕ ಮಹಾನಗರ ಪಾಲಿಕೆಯ ಕಟ್ಟಡಗಳು ಕಾರ್ಯ ನಿರ್ವಹಣೆ ಮಾಡುತ್ತಿದ್ದು ಅವುಗಳಲ್ಲಿ ಸಮರ್ಪಕವಾದ ನಿರ್ವಹಣೆ ಇಲ್ಲದೇ ಕಟ್ಟಡಗಳಲ್ಲಿ ಅನೇಕ ತೊಂದರೆಗಳು ಇರುವುದನ್ನು ಬಗೆಹರಿಸುವ ನಿಟ್ಟಿನಲ್ಲಿ ವಾರ್ಷಿಕ ನಿರ್ವಹಣೆ ಸಂಬಂಧ ಕ್ರಮ ಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ತಿಳಿಸಿದರು.

## 2021-22ನೇ ಸಾಲಿನ ಆರ್ಥಿಕ ವರ್ಷದಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ನಿರ್ವಹಣೆ ಕಾಮಗಾರಿ ಕುರಿತು

ವಾರ್ಡ್ ಪರಿಮಿತಿಯಲ್ಲಿ ರೈಲ್ವೆ ಸಮಾನಾಂತರ ರಸ್ತೆಯಲ್ಲಿ ಕುರಿ–ಕೋಳಿಗಳ ತ್ಯಾಜ್ಯಗಳನ್ನು ತಂದು ಹಾಕಿ ಅನೈರ್ಮಲ್ಯ ಉಂಟು ಮಾಡುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸುತ್ತಾ ಈಗಾಗಲೇ ಅಳವಡಿಸಲಾಗಿರುವ ಸಿ.ಸಿ ಟಿ.ವಿಯನ್ನು ಸಂಪೂರ್ಣವಾಗಿ ಹಾನಿಗೀಡು ಮಾಡಿದ್ದು ಸದರಿ ಸ್ಥಳದಲ್ಲಿ ಈ ವಿಚಾರವಾಗಿ ನೈರ್ಮಲ್ಯವನ್ನು ಕಾಪಾಡುವಲ್ಲಿ ಬಹಳ ತೊಂದರೆ ಆಗುತ್ತಿರುವ ಬಗ್ಗೆ ಗಮನ ಸೆಳೆದರು.

ಶ್ರೀಮತಿ ಜ್ಯೋತಿಯವರು ಮಾತನಾಡುತ್ತಾ ವಾರ್ಡ್‌ನಲ್ಲಿ ನಾಯಿ ಸಾಕಿರುವವರು ದಿನದಲ್ಲಿ ಎರಡು ಬಾರಿ ರಸ್ತೆಗಳಿಗೆ ಕರೆದುಕೊಂಡು ಬಂದು ಅನೈರ್ಮಲ್ಯ ಉಂಟು ಮಾಡುತ್ತಿರುವ ಬಗ್ಗೆ ಸಭೆಯ ಗಮನ ಸೆಳೆದರು. ಈ ಬಗ್ಗೆ ನಾಯಿ ಸಾಕಣೆ ಮಾಡಿರುವವರ ಮನೆಗಳಿಗೆ ಭೇಟಿ ನೀಡಿ ನಾಯಿಯಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ನಾಯಿ ಮಾಲೀಕರೆ ಸ್ವಚ್ಛ ಮಾಡುವ ಬಗ್ಗೆ ಜಾಗೃತಿ ಮೂಡಿಸಲು ಸ್ವಯಂ ಸೇವಕರ ತಂಡವನ್ನು ರಚಿಸಿಕೊಂಡು ಅರಿವು ಮಾಡಿಕೊಡುವ ಬಗ್ಗೆ ಅಭಿಪ್ರಾಯ ವ್ಯಕ್ತವಾಯಿತು.

ಸದರಿ ಸ್ಥಳದಲ್ಲಿ ತ್ಯಾಜ್ಯಗಳನ್ನು ತಂದು ಸುರಿಯುತ್ತಿರುವವರನ್ನು ಪತ್ತೆ ಮಾಡಿ ದಂಡ ವಿಧಿಸಿ ಅಗತ್ಯ ಕ್ರಮ ಕೈಗೊಳ್ಳುವ ದಿಸೆಯಲ್ಲಿ ಪಾಲಿಕೆಯ ಮಾರ್ಷಲ್‌ಗಳನ್ನು ಬಳಸಿಕೊಂಡು ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಅಗತ್ಯ ಕ್ರಮ ಕೈಗೊಳ್ಳಲು ಕಾರ್ಯದರ್ಶಿಯವರಿಗೆ ಸೂಚಿಸಿದರು. ಈ ಒಂದು ಸಮಸ್ಯೆ ಹೊರತು ಪಡಿಸಿ ವಾರ್ಡ್ ಪರಿಮಿತಿಯಲ್ಲಿ ಸ್ವಚತೆಯು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿರುವ ಬಗ್ಗೆ ಸಭೆಯಲ್ಲಿ ಮೆಚ್ಚುಗೆ ವ್ಯಕ್ತಪಡಿಸಲಾಯಿತು.

**ಸಿಲ್ಟ್ ಮತ್ತು ಟ್ರಾಕ್ಟರ್ ಬಳಸಿ ವಾರ್ಡ್ ಸ್ವಚ್ಛಗೊಳಿಸುವ ಬಗ್ಗೆ.**

ಕಾರ್ಯದರ್ಶಿಯವರು ಮಾತನಾಡುತ್ತಾ ವಾರ್ಡ್ ವ್ಯಾಪ್ತಿಯಲ್ಲಿ ಸಿಲ್ಟ್ & ಟ್ರಾಕ್ಟರ್ ಬಳಸಿ ಸ್ವಚ್ಛತೆ ನಿರ್ವಹಣೆಗಾಗಿ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು ಶೀಘ್ರದಲ್ಲಿ ಕಾಮಗಾರಿ ನಿರ್ವಹಣೆ ಸಂಬಂಧ ಕಾರ್ಯಾದೇಶ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು.

**ರಸ್ತೆ ಗುಂಡಿ ನಿರ್ವಹಣೆ ಬಗ್ಗೆ**

ಕಾರ್ಯದರ್ಶಿಯವರು ಮಾತನಾಡುತ್ತಾ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಸಂಬಂಧ ಹಾಟ್ ಮಿಕ್ಸ್ ಪ್ಲಾಂಟ್ ನಿಂದ ಡಾಂಬರ್ ಮಿಕ್ಸ್ ಬಳಸಿಕೊಳ್ಳಲು ಕೇಂದ್ರ ಕಛೇರಿಗೆ ಇಂಡೆಂಟ್ ನೀಡಲಾಗಿರುತ್ತದೆ. ಶೀಘ್ರದಲ್ಲಿ ಕಾಮಗಾರಿ ನಿರ್ವಹಣೆ ಸಂಬಂಧ ಕಾರ್ಯಾದೇಶ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು.

**ಬೀದಿ ದೀಪಗಳ ನಿರ್ವಹಣೆ ಬಗ್ಗೆ:**

ಶ್ರೀ ಶಿವಕುಮಾರ್ ರವರು ಮಾತನಾಡುತ್ತಾ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಬೀದಿ ದೀಪಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು.

ಈ ವಿಚಾರವಾಗಿ ಮಾತನಾಡಿದ ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಯವರು ವಾರ್ಡ್ 133 ರಲ್ಲಿ ಈ ಕೆಳಕಂಡ ನಿರ್ವಹಣೆ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಸದರಿ ಕಾಮಗಾರಿಗಳ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿದರು. ಸದರಿ ಕಾಮಗಾರಿಗಳ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಲು ನಿರ್ಣಯ ಕೈಗೊಂಡು 2021-22ನೇ ಸಾಲಿನಲ್ಲಿ ನಿರ್ವಹಣೆಗಾಗಿ ನೀಡಿರುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ನಿರ್ಣಯ ಕೈಗೊಂಡು ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಅನುಮೋದನೆಗಾಗಿ ಸಲ್ಲಿಸಲು ನಿರ್ಧರಿಸಲಾಯಿತು.

**ಕಾಮಗಾರಿಗಳ ವಿವರಗಳು:**

| Sl. No | Name of works | Est Cost (Rs in lakhs) |
|---|---|---|
| 1 | Annual Maintenance of Borewells and Water supply lines in Ward Jurisidiction in Ward No.133 | 20.00 |
| 2 | Maintenance of Footpaths, Drains & Re-Asphalting of damaged roads in Ward Jurisidiction in Ward No.133 | 20.00 |
| 3 | Filling of Pot holes in Ward Jurisidiction in Ward No.133 | 20.00 |
| | **TOTAL Rs:** | 60.00 |

ನೋಡಲ್ ಅಧಿಕಾರಿಯವರು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿ/ನೌಕರರಿಗೆ ವಂದನೆ ಸಲ್ಲಿಸುತ್ತಾ ಇನ್ನೂ ಮುಂದೆಯೂ ಕೂಡ ಈ ಸಭೆಗಳಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಪೂರ್ವ ತಯಾರಿ ಮಾಡಿಕೊಂಡು ಸಭೆಯಲ್ಲಿ ಭಾಗವಹಿಸಲು ಸೂಚಿಸುತ್ತಾ ವಾರ್ಡ್‌ನ ಕುಂದು ಕೊರತೆಗಳತ್ತು ಗಮನ ಹರಿಸಿ ವಾರ್ಡ್‌ನ ಅಭಿವೃದ್ಧಿ ಮಾಡಲು ಸಹಕಾರ ನೀಡಬೇಕೆಂದು ಎಲ್ಲರಲ್ಲೂ ಕೋರಿದರು.

ಸದಸ್ಯ ಕಾರ್ಯದರ್ಶಿಯವರಾದ ಶ್ರೀ ಸ್ವಾಮಿ.ಕೆ.ಎಸ್. ರವರು ಅಧ್ಯಕ್ಷರ ಅನುಮತಿಯೊಂದಿಗೆ ಹಾಜರಾದ ಎಲ್ಲರಿಗೂ ವಂದನೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

20/12/2021

ಸದಸ್ಯ ಕಾರ್ಯದರ್ಶಿ: ವಾರ್ಡ್-132 ಹಾಗೂ
ಸಹಾಯಕ ಅಭಿಯಂತರರು.

( ರಾಧಾಕೃಷ್ಣ)
ನೋಡಲ್ ಅಧಿಕಾರಿ, ವಾರ್ಡ್-132